**O.S.115-15** **DW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ S R A, ವಕೀಲರಿಂದಃ**

7. ನ್ಯಾಯಾಲಯಕ್ಕೆ ನಾನೊಬ್ಬನೇ ಬಂದಿದ್ದೇನೆ. ನನ್ನ ಜೊತೆಗೆ ಮಗಳು ಶೋಭಾ 4 ನೇ ವಾದಿ ಬಂದಿದ್ದಾಳೆ. ನನ್ನ ಮಗಳು ಹಾಗೂ ನನ್ನ ತಮ್ಮನ ಮಕ್ಕಳು ಹೊಲ ಸಲುವಾಗಿ ನನ್ನ ಮೇಲೆ ಕೇಸ ಹಾಕಿದ್ದಾರೆ. ಪ್ರತಿವಾದಿ 4 ರಿಂದ 6 ರವರಿಗೆ ಖರೀದಿ ಮಾಡಿಕೊಟ್ಟಿಲ್ಲ ಹಾಗೂ ಗೊತ್ತಿಲ್ಲ. ಪ್ರತಿವಾದಿ 4 ರಿಂದ 6 ರವರು ನಮಗೆ ಸಂಬಂಧ ಇಲ್ಲ, ಆ ಕಾರಣದಿಂದ ನಾವು ಅವರ ಮೇಲೆ ಕೇಸ ಹಾಕಿಲ್ಲ. ನಾನು ಪ್ರತಿವಾದಿ 4 ರಿಂದ 6 ರವರಿಗೆ ಉಪ-ನೋಂದಣಿ ಕಚೇರಿಗೆ ಹೋಗಿ ಖರೀದಿ ಪತ್ರ ಬರೆದುಕೊಟ್ಟಿಲ್ಲ. ನಾನು ನಮ್ಮ ವಕೀಲರಿಗೆ ಭದ್ರತೆಗೋಸ್ಕರ ನಾಮಕಾವಸ್ಥೆಗೆ ಬರೆದುಕೊಟ್ಟಿದ್ದೇನೆಂದು ಹೇಳಿಲ್ಲ. ನನಗೆ ಮುಖ್ಯ ವಿಚಾರಣೆಗೆ ಓದಲು ಬರುವುದಿಲ್ಲ. ಗಜಾನನ ಅಣವೇಕರ ರವರು ಮೋಸ ಮಾಡಿದ್ದಾನೆ ಅಂತಾ ಪೋಲಿಸರಿಗೆ ದೂರು ನೀಡಿದ್ದೇನೆ. ದೂರಿನ ಪ್ರತಿ ಹಾಜರಪಡಿಸಿಲ್ಲ. ಗಜಾನನ ಅಣವೇಕರ ರವರ ಮೇಲೆ ನಾನು ದಾವೆ ಸಲ್ಲಿಸಿಲ್ಲ, ಮುಂದೆ ಮಾಡುತ್ತೇನೆ. ನನ್ನ ತಂದೆಯಿಂದ 9 ಎಕರೆ ಚಿಲ್ಲರೆ ಜಮೀನು ಬಂದಿದೆ. 9 ಎಕರೆ ಪೈಕಿ 3 ಜನರಿಗೆ ಮಾರಾಟ ಮಾಡಿ ಉಳಿದಿದ್ದು ಇದೆ. 5 ಎಕರೆ ನನ್ನ ಹಾಗೂ ನನ್ನ ತಮ್ಮ ನ ಹೆಸರಿನಲ್ಲಿದೆ. ಪ್ರತಿವಾದಿಗಳಲ್ಲದೇ ಬೇರೆಯವರಿಗೆ ಆಸ್ತಿ ಮಾರಾಟ ಮಾಡಿಲ್ಲವೆಂದು ಕೇಸ ಹಾಕಿದ್ದೇವೆ. ಪ್ರತಿವಾದಿ ನಂಃ 4 ರಿಂದ 6 ರವರಿಗೆ ನಾವು ಖರೀದಿ ಪತ್ರ ಬರೆದುಕೊಟ್ಟ ನಂತರ ಅವರು ಚೆಕ್ ಮೂಲಕ ನಮ್ಮ ಖಾತೆಗೆ ಹಣ ಹಾಕಿದ್ದನ್ನು ನಾವು ತೆಗೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾವು ಕಾನೂನುಬದ್ಧವಾಗಿ ಮಾರಾಟ ಮಾಡಿದ್ದರಿಂದ ಯಾವುದೇ ಕೇಸ ಹಾಕಿಲ್ಲ ಅಂದರೆ ಸರಿಯಲ್ಲ. ಈ ದಾವೆಯನ್ನು 2005 – 2010 ರಲ್ಲಿ ಹಾಕಿರಬಹುದು. ಒಂದು ತಿಂಗಳು - ಎರಡು ತಿಂಗಳ ಹಿಂದೆ ನಮ್ಮ ವಕೀಲರನ್ನು ಬೆಟ್ಟಿಯಾಗಿ ನನ್ನ ಹೇಳಿಕೆ ಹಾಕಿದ್ದೇನೆ. ಪ್ರತಿವಾದಿ 4 ರಿಂದ 6 ರವರಿಗೆ ಆಸ್ತಿ ಮಾರಾಟ ಮಾಡಿ ಹಣ ಪಡೆದಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**O.S.115-15** **DW-2**

ಮಕ್ಕಳ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಚಟಕ್ಕೋಸ್ಕರ ಆಸ್ತಿ ಮಾರಾಟ ಮಾಡಿದ್ದೇನೆ ಅಂತಾ ವಾದಿಗಳು ಹೇಳಿದ್ದು ಸುಳ್ಳು ಇದೆ. ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.